# ಕರ್ನಾಟಕ ಸರ್ಕಾರ

## ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ,

## ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರ ಕಛೇರಿ.

*ಸಂಖ್ಯೆ: ಎಡಿಎಫ್/ಎಡಿಸಿ/51/2012-13* *ದಿನಾಂಕ:ೞ1-11-2013*

ವಿಷಯ: ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಕಾಯ್ದೆ 2012ರ ಕಲಂ 33(19)ರಡಿ ಲೆಕ್ಕಪರಿಶೋಧಕರಿಗೆ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಗೆ ಸೌಹಾರ್ದ ಸಹಕಾರ ಸಂಘಗಳ ಲೆಕ್ಕಪರಿಶೋಧನೆಗೆ ಪಾವತಿಸಬೇಕಾದ ಸಂಭಾವನೆಯನ್ನು ಸಹಕಾರ ಸಂಘದ ಮಹಾಸಭೆಯು ನಿಗದಿಪಡಿಸುವ ಬಗ್ಗೆ ಮಾರ್ಗಸೂಚಿಗಳು.

ಉಲ್ಲೇಖ:
1) ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ 2012- ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 72 ಶಾಸನ 2012, ಬೆಂಗಳೂರು, ದಿನಾಂಕ: 11.01.2013.
2) ಸಹಕಾರ ಸಚಿವಾಲಯ ಅಧಿಸೂಚನೆ ಸಂಖ್ಯೆ:ಸಿಒ 196:ಸಿಎಲ್‌ಎಂ 2012, ದಿನಾಂಕ: 08.02.2013.
3) ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು 2013, ಅಧಿಸೂಚನೆ ಸಂಖ್ಯೆ : ಸಿಒ/15/ಸಿಎಲ್‌ಎಂ 2013 ಬೆಂಗಳೂರು ದಿನಾಂಕ 19.09.2013.
4) ಸರ್ಕಾರದ ಸಂಖ್ಯೆ:ಸಿಒ 09:ಸಿಎಲ್‌ಎಂ 2007:ಬೆಂಗಳೂರು, ದಿನಾಂಕ: 08.03.2007.
5) ಸರ್ಕಾರದ ಆದೇಶ ಸಂಖ್ಯೆ:ಸಿಒ 198:ಸಿಎಲ್‌ಎಂ 2010, ದಿನಾಂಕ: 04.01.2011.

*******

**ಪ್ರಸ್ತಾವನೆ:**

ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ಕ್ಕೆ ತಿದ್ದುಪಡಿಯಾಗಿದೆ. ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಕಾಯ್ದೆ 2012ರ ಕಲಂ 33(19)ರನ್ವಯ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಕಾರ್ಯಕ್ಕೆ ಸಂಭಾವನೆಯನ್ನು ಆಯಾ ಸಂಘದ ಸರ್ವ ಸದಸ್ಯರ ಸಭೆಯಲ್ಲಿ ನಿರ್ಧರಣೆ ಮಾಡಬೇಕಾಗಿರುತ್ತದೆ. ಉಲ್ಲೇಖ(2)ರ ಅಧಿಸೂಚನೆಯಂತೆ, ಈ ತಿದ್ದುಪಡಿಗಳು ದಿನಾಂಕ:11.02.2013ರಿಂದ ಜಾರಿಗೆ ಬಂದಿರುತ್ತದೆ.

ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) 2013ರ ನಿಯಮಗಳು, ಕರ್ನಾಟಕ ರಾಜ್ಯ ಪತ್ರದಲ್ಲಿ, ವಿಶೇಷ ರಾಜ್ಯ ಪತ್ರಿಕೆ ಶೀರ್ಷಿಕೆಯಡಿ ಅಧಿಸೂಚನೆ ಸಂಖ್ಯೆ:ಸಿಒ15ಸಿಎಲ್‌ಎಂ 2013 ದಿನಾಂಕ:19-09-2013ರ ಮೇರೆಗೆ ಪ್ರಕಟಗೊಂಡು ಜಾರಿಗೆ ಬಂದಿರುತ್ತದೆ. ಈ ನಿಯಮಗಳನ್ವಯ ಒಂದು ಸಹಕಾರಿಯು ಯಾವುದೇ ಸಹಕಾರಿ ವರ್ಷದ

ಲೆಕ್ಕಪತ್ರಗಳನ್ನು ಪರಿಶೋಧಿಸಲು ಅಥವಾ ಪರಿಶೋಧನೆ ಮಾಡಿದಲ್ಲಿ ಆ ಬಗ್ಗೆ ಲೆಕ್ಕಪರಿಶೋಧಕರಿಗೆ ಅಥವಾ ಲೆಕ್ಕಪರಿಶೋಧನಾ ಸಂಸ್ಥೆಗೆ ಸಂಭಾವನೆಯನ್ನು ಸಹಕಾರಿ ಸಂಸ್ಥೆಯ ಸಾಮಾನ್ಯ ಸಭೆಯು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರಿಂದ ದುಡಿಯುವ ಬಂಡವಾಳ ಮತ್ತು ವ್ಯಾಪಾರ ವಹಿವಾಟು ಆಧರಿಸಿ ಕಾಲಕಾಲಕ್ಕೆ ನೀಡುವ ಮಾರ್ಗಸೂಚಿಗಳನ್ವಯ ನಿಗದಿಪಡಿಸಲು ಅವಕಾಶವಿರುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು 2013ರ ನಿಯಮ 9ಡಿರಲ್ಲಿನ ಅಧಿಕಾರವನ್ನು ಚಲಾಯಿಸಿ ಈ ಕೆಳಗಿನಂತೆ, ಮಾರ್ಗಸೂಚಿಗಳನ್ನು ನೀಡಲಾಗಿದೆ.

## <u>ಮಾರ್ಗಸೂಚಿಗಳು</u>

ಕರ್ನಾಟಕ ಸೌಹಾರ್ದ ಸಹಕಾರಿ ಸಂಸ್ಥೆಗಳು ಸಾಮಾನ್ಯ ಸಭೆಯಲ್ಲಿ ಸಂಸ್ಥೆಯ ದುಡಿಯುವ ಬಂಡವಾಳ ಹಾಗೂ ವ್ಯಾಪಾರ ವಹಿವಾಟುಗಳನ್ನು ಆಧರಿಸಿ ಲೆಕ್ಕಪರಿಶೋಧನಾ ಸಂಭಾವನೆಯನ್ನು ನಿಗದಿಪಡಿಸುವಾಗ, ಈ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸಬಹುದಾಗಿದೆ.

| ಕ್ರ. ಸಂ. | ದುಡಿಯುವ ಬಂಡವಾಳ/ವ್ಯಾಪಾರ ವಹಿವಾಟು | ಲೆಕ್ಕಪರಿಶೋಧನಾ ಸಂಭಾವನೆ ಮಾರ್ಗಸೂಚಿ ದರ |
|---|---|---|
| 1. | ಸಂಸ್ಥೆಯ ದುಡಿಯುವ ಬಂಡವಾಳ/ವ್ಯಾಪಾರ ವಹಿವಾಟು ರೂ. 10.00 ಕೋಟಿಗಳವರೆಗೆ | ಪ್ರತಿ ಒಂದು 100 ರೂ.ಗಳ ದುಡಿಯುವ ಬಂಡವಾಳ/ವ್ಯಾಪಾರ ವಹಿವಾಟಿಗೆ 10 ಪೈಸೆಯಂತೆ ಗರಿಷ್ಠ ರೂ. 75,000-00 |
| 2. | ಸಂಸ್ಥೆಯ ದುಡಿಯುವ ಬಂಡವಾಳ/ವ್ಯಾಪಾರ ವಹಿವಾಟು ರೂ.10 ಕೋಟಿ ಮೀರಿ ರೂ. 50.00 ಕೋಟಿಗಳವರೆಗೆ | ರೂ.75,000+10 ಕೋಟಿ ಮೀರಿದ ಪ್ರತಿ 100ರೂ.ಗಳ ದುಡಿಯುವ ಬಂಡವಾಳ/ವ್ಯಾಪಾರ ವಹಿವಾಟಿಗೆ 5 ಪೈಸೆ ಯಂತೆ. ಗರಿಷ್ಠ ರೂ. 1,50,000-00 |
| 3. | ಸಂಸ್ಥೆಯ ದುಡಿಯುವ ಬಂಡವಾಳ/ವ್ಯಾಪಾರ ವಹಿವಾಟು ರೂ. 50 ಕೋಟಿ ಮೀರಿ ರೂ. 100.00 ಕೋಟಿಗಳವರೆಗೆ | ರೂ.1,50,000+ರೂ 50 ಕೋಟಿ ಮೀರಿದ ಪ್ರತಿ 100ರೂ.ಗಳ ದುಡಿಯುವ ಬಂಡವಾಳ/ವ್ಯಾಪಾರ ವಹಿವಾಟಿಗೆ 5 ಪೈಸೆಯಂತೆ.ಗರಿಷ್ಠ ರೂ. 2,50,000-00 |
| 4. | ಸಂಸ್ಥೆಯ ದುಡಿಯುವ ಬಂಡವಾಳ/ವ್ಯಾಪಾರ ವಹಿವಾಟು ರೂ. 100 ಕೋಟಿ ಮೇಲ್ಪಟ್ಟು | ರೂ.2,50,000-00.+100 ಕೋಟಿಗೆ ಮೀರಿದ ಪ್ರತಿ 100ರೂ.ಗಳ ದುಡಿಯುವ ಬಂಡವಾಳ/ವ್ಯಾಪಾರ ವಹಿವಾಟಿಗೆ 2 ಪೈಸೆಯಂತೆ. ಗರಿಷ್ಠ ರೂ.10,00,000-00 |

ಪರಂತು ಪಟ್ಟಣ ಸಹಕಾರ ಬ್ಯಾಂಕುಗಳು ಈ ಹಿಂದೆ ಉಲ್ಲೇಖ (4) ಮತ್ತು (5)ರಲ್ಲಿನ ಸರ್ಕಾರಿ ಆದೇಶದಲ್ಲಿ ಸೂಚಿಸಿರುವ ದರಗಳನ್ನು ಗಮನದಲ್ಲಿಟ್ಟುಕೊಂಡು ಲೆಕ್ಕಪರಿಶೋಧಕರ ಸಂಭಾವನೆಯನ್ನು ನಿಗದಿಪಡಿಸಿಕೊಳ್ಳಬಹುದಾಗಿರುತ್ತದೆ.

1. ಸರ್ವ ಸದಸ್ಯರ ಸಭೆಯಲ್ಲಿ ನಿರ್ಧರಣೆ ಮಾಡುವ ಲೆಕ್ಕಪರಿಶೋಧನಾ ಸಂಭಾವನೆಯು ಪ್ರಯಾಣ ವೆಚ್ಚ, ವರದಿ ಸಿದ್ಧತೆ ವೆಚ್ಚಗಳನ್ನು ಒಳಗೊಂಡಿರುವುದು.
2. ಪ್ರತಿಯೊಂದು ಸೌಹಾರ್ದ ಸಹಕಾರಿ ಸಂಸ್ಥೆಯು, ಲೆಕ್ಕಪರಿಶೋಧಕರ/ಲೆಕ್ಕಪರಿಶೋಧನಾ ಸಂಸ್ಥೆಯೊಂದಿಗೆ ಸಂಭಾವನೆ ದರವನ್ನು ಸಂಧಾನದ ಮೂಲಕ ತೀರ್ಮಾನಿಸಿಕೊಳ್ಳಲು ಸ್ವತಂತ್ರರಾಗಿರುತ್ತಾರೆ.
3. ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ಅಧಿಕಾರಿಗಳು/ಲೆಕ್ಕಪರಿಶೋಧಕರು ನಿರ್ವಹಿಸುವ ಸಹಕಾರಿ ಸಂಸ್ಥೆಯ ಲೆಕ್ಕಪರಿಶೋಧನೆಗೆ ಸಂಬಂಧಪಟ್ಟಂತೆ, ಈ ಮಾರ್ಗಸೂಚಿಯಲ್ಲಿರುವ ದರಗಳನ್ನು ಅನುಸರಿಸಿ ಲೆಕ್ಕಪರಿಶೋಧನಾ ಶುಲ್ಕವನ್ನು ಸರ್ಕಾರಕ್ಕೆ ಪಾವತಿಸಬೇಕು.
4. ಸಂಬಂಧಪಟ್ಟ ಲೆಕ್ಕಪರಿಶೋಧಕರು/ಲೆಕ್ಕಪರಿಶೋಧಿಸುವ ಸಂಸ್ಥೆ ಲೆಕ್ಕಪರಿಶೋಧನಾ ವರದಿ ಬಿಡುಗಡೆ ಮಾಡಿದ ನಂತರ, ಲೆಕ್ಕಪರಿಶೋಧನಾ ಸಂಭಾವನೆ ಪಾವತಿಸಲು ಸಂಸ್ಥೆಗೆ ಬಿಲ್ಲನ್ನು ನೀಡಿ ಸಂಸ್ಥೆಯಿಂದ ಸಂಭಾವನೆಯನ್ನು ನೇರವಾಗಿ ಪಡೆಯುವುದು ಮತ್ತು ಸಹಕಾರಿಗೆ ಅಧಿಕೃತ ರಸೀತಿಯನ್ನು ನೀಡತಕ್ಕದ್ದು.

ಪರಂತು ಸೌಹಾರ್ದ ಸಹಕಾರಿ ಸಂಸ್ಥೆಗಳು ಲೆಕ್ಕಪರಿಶೋಧನಾ ಇಲಾಖೆಯ ಸಿಬ್ಬಂದಿಯಿಂದ ನಿರ್ವಹಿಸಿದ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ, ಸಂಬಂಧಿಸಿದ ಲೆಕ್ಕಪರಿಶೋಧಕರು ಸರ್ಕಾರದ ಲೆಕ್ಕ ಶೀರ್ಷಿಕೆಗೆ ಲೆಕ್ಕಪರಿಶೋಧನಾ ಸಂಭಾವನೆಯನ್ನು ಜಮಾ ಮಾಡಿಸತಕ್ಕದ್ದು, ಸೌಹಾರ್ದ ಸಹಕಾರಿ ಸಂಸ್ಥೆಯು ಸದರಿ ಮೊತ್ತವನ್ನು "0425-00-101-0-01 ಲೆಕ್ಕಪರಿಶೋಧನಾ ಶುಲ್ಕ" ಲೆಕ್ಕಶೀರ್ಷಿಕೆಯಲ್ಲಿ ಖಜಾನೆಗೆ ಪಾವತಿ ಮಾಡಿ, ಚಲನ್ ಪ್ರತಿಯನ್ನು ಸಂಬಂಧಿಸಿದ ಲೆಕ್ಕಪರಿಶೋಧಕರು ಹಾಗೂ ಜಿಲ್ಲಾ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರಿಗೆ ನೀಡುವುದು.

ಈ ಮಾರ್ಗಸೂಚಿಗಳು ಈ ಕೂಡಲೇ ಜಾರಿಗೆ ಬರುತ್ತಿದ್ದು, ಬಾಕಿಯಿರುವ ಲೆಕ್ಕಪರಿಶೋಧನೆ ಸೇರಿದಂತೆ ಎಲ್ಲಾ ಸಾಲುಗಳ ಲೆಕ್ಕಪರಿಶೋಧನೆಗೆ, ಈ ದಿನಾಂಕ ಹಾಗೂ ನಂತರ ನೇಮಕ ಮಾಡುವ ಎಲ್ಲಾ ಲೆಕ್ಕಪರಿಶೋಧಕರು ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಗೆ ಅನ್ವಯವಾಗುತ್ತದೆ.

ನಿರ್ದೇಶಕರು
ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ

Y h R/Audit fee guidelines 20-07-2013/m

ಕರ್ನಾಟಕ ಸರ್ಕಾರ.

ಸಂಖ್ಯೆ:ಸಿಓ 92 ಸಿಎಲ್‌ಎಂ 2016

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 19 -12-2016.

**ಇವರಿಂದ:**

ಸರ್ಕಾರದ ಕಾರ್ಯದರ್ಶಿ,
ಸಹಕಾರ ಇಲಾಖೆ,
ಬೆಂಗಳೂರು-560 001.

**ಇವರಿಗೆ:**

**ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು,**
ನಂ. 17, ಜಯನಿವಾಸ, ಶಂಕರಮಠ ರಸ್ತೆ,
ಬಸವನಗುಡಿ, ಬೆಂಗಳೂರು-560 004.

ಮಾನ್ಯರೆ,

ವಿಷಯ: ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 63 ರಡಿ ಸಹಕಾರ ಸಂಘಗಳ ಲೆಕ್ಕಪರಿಶೋಧನೆ ನಿರ್ವಹಿಸುವ ಲೆಕ್ಕಪರಿಶೋಧಕರಿಗೆ ಅಥವಾ ಲೆಕ್ಕಪರಿಶೋನಾ ಫರ್ಮ್‌ಗಳಿಗೆ ಪಾವತಿಸಬೇಕಾದ ಸಂಭಾವನೆಯನ್ನು ಪರಿಶೀಲಿಸುವ ಕುರಿತು.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ:ಎಡಿಎಫ್/ಎಡಿಸಿ/52/2012-13, ದಿ:16-9-2016 ಹಾಗೂ ದಿನಾಂಕ:18-10-2016

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ತಮ್ಮ ಪ್ರಸ್ತಾವೆಯನ್ನು ಪರಿಶೀಲಿಸಿ, "ಪ್ರತಿಯೊಂದು ಸಹಕಾರ ಸಂಘವು ಲೆಕ್ಕ ಪರಿಶೋಧಕರ / ಲೆಕ್ಕ ಪರಿಶೋಧನಾ ಸಂಸ್ಥೆಯೊಂದಿಗೆ ಸಂಭಾವನೆ ದರವನ್ನು ಸಂಧಾನ ಮೂಲಕ ತೀರ್ಮಾನಿಸಿಕೊಳ್ಳಲು ಸ್ವತಂತ್ರರಾಗಿರುತ್ತಾರೆ" ಎಂಬ ವಾಕ್ಯವನ್ನು ಕೈ ಬಿಡಲು ಅನುಮತಿ ನೀಡಲಾಗಿದೆ ಎಂದು ತಿಳಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

Radhakrishna

(ಕೆ. ರಾಧಾಕೃಷ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಹಕಾರ ಇಲಾಖೆ.
ದೂ.ಸಂ.22032479.

**ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ನಿರ್ದೇಶಕರ ಕಛೇರಿ,**
**ನಂ.17, ಜಯನಿವಾಸ, ಶಂಕರಮಠ ರಸ್ತೆ, ಬಸವನಗುಡಿ, ಬೆಂಗಳೂರು– 560 004**

ಸಂಖ್ಯೆ: ಎಡಿಎಫ್/ಎಡಿಸಿ/51/2013-14. ದಿನಾಂಕ: 16-03-2017

ಎರಡು ವಿಭಾಗದ ಜಂಟಿ ನಿರ್ದೇಶಕರುಗಳಿಗೆ,
ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ,
ಎಲ್ಲಾ ಉಪವಿಭಾಗೀಯ ಸಹಾಯಕ ನಿರ್ದೇಶಕರುಗಳಿಗೆ,
ಎಲ್ಲಾ ಸನ್ನದು ಲೆಕ್ಕಪರಿಶೋಧಕರುಗಳಿಗೆ

ಮಾನ್ಯರೇ,

ವಿಷಯ: ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಕಾಯ್ದೆ 2012ರ ಕಲಂ 33(19)ರಡಿ ಲೆಕ್ಕಪರಿಶೋಧಕರಿಗೆ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಗೆ ಸೌಹಾರ್ದ ಸಹಕಾರ ಸಂಘಗಳ ಲೆಕ್ಕಪರಿಶೋಧನೆಗೆ ಪಾವತಿಸಬೇಕಾದ ಸಂಭಾವನೆಯನ್ನು ಸಹಕಾರ ಸಂಘದ ಮಹಾಸಭೆಯು ನಿಗದಿಪಡಿಸುವ ಬಗ್ಗೆ ಮಾರ್ಗಸೂಚಿಗಳು.

ಉಲ್ಲೇಖ: 1) ನಿರ್ದೇಶನಾಲಯದ ಮಾರ್ಗಸೂಚಿ ಸಂಖ್ಯೆ:ಎಡಿಎಫ್/ಎಡಿಸಿ/51/2012-13 ದಿನಾಂಕ:27-11-2013.
2) ಸರ್ಕಾರದ ಪತ್ರ ಸಂಖ್ಯೆ:ಸಿಒ/92/ಸಿಎಲ್ಎಂ/2016, ದಿನಾಂಕ 19-12-2016.

******

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1)ರ ಪತ್ರದಲ್ಲಿ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಪಾವತಿಸಬೇಕಾದ ಸಂಭಾವನೆಯ ಕುರಿತು ಮಾರ್ಗಸೂಚಿಗಳನ್ನು ಹೊರಡಿಸಲಾಗಿತ್ತು.

ಮಾರ್ಗಸೂಚಿಯ ಪುಟ-3ರ ಷರತ್ತಿನ ಕ್ರಮಸಂಖ್ಯೆ 2ರಲ್ಲಿ "ಪ್ರತಿಯೊಂದು ಸೌಹಾರ್ದ ಸಹಕಾರಿ ಸಂಸ್ಥೆಯು ಲೆಕ್ಕಪರಿಶೋಧಕರ/ಲೆಕ್ಕಪರಿಶೋಧನಾ ಸಂಸ್ಥೆಯೊಂದಿಗೆ ಸಂಭಾವನೆ ದರವನ್ನು ಸಂಧಾನದ ಮೂಲಕ ತೀರ್ಮಾನಿಸಿಕೊಳ್ಳಲು ಸ್ವತಂತ್ರರಾಗಿರುತ್ತಾರೆ" ಎಂದು ಇರುತ್ತದೆ.

ಮುಂದುವರೆದಂತೆ, ಸರ್ಕಾರವು ಉಲ್ಲೇಖ (2)ರ ಪತ್ರದಲ್ಲಿ "ಪ್ರತಿಯೊಂದು ಸೌಹಾರ್ದ ಸಹಕಾರಿಯು ಲೆಕ್ಕಪರಿಶೋಧಕರ/ಲೆಕ್ಕಪರಿಶೋಧನಾ ಸಂಸ್ಥೆಯೊಂದಿಗೆ ಸಂಭಾವನೆ ದರವನ್ನು ಸಂಧಾನದ ಮೂಲಕ ತೀರ್ಮಾನಿಸಿಕೊಳ್ಳಲು ಸ್ವತಂತ್ರರಾಗಿರುತ್ತಾರೆ" ಎಂಬ ಷರತ್ತನ್ನು ತೆಗೆದುಹಾಕಿರುತ್ತದೆ. ಆದ್ದರಿಂದ ಇನ್ನು ಮುಂದೆ ಸೌಹಾರ್ದ ಸಹಕಾರಿ ರವರು ಲೆಕ್ಕಪರಿಶೋಧನೆಗೆ ಪಾವತಿಸಬೇಕಾದ ಲೆಕ್ಕಪರಿಶೋಧನಾ ಶುಲ್ಕ/ಸಂಭಾವನೆಯನ್ನು ಸಂಧಾನದ ಮೂಲಕ ತೀರ್ಮಾನಿಸಿಕೊಳ್ಳಲು ಅವಕಾಶವಿರುವುದಿಲ್ಲ. ಉಲ್ಲೇಖ (1)ರ ಈ ನಿರ್ದೇಶನಾಲಯದ ಮಾರ್ಗಸೂಚಿಗಳನ್ವಯ ಲೆಕ್ಕಪರಿಶೋಧನೆ ನಿರ್ವಹಿಸಿದ ಲೆಕ್ಕಪರಿಶೋಧಕರಿಗೆ/ಸನ್ನದು ಲೆಕ್ಕಪರಿಶೋಧಕರಿಗೆ ಲೆಕ್ಕಪರಿಶೋಧನಾ ಶುಲ್ಕ/ಸಂಭಾವನೆ ಪಾವತಿಸತಕ್ಕದ್ದು.

ಉಳಿದಂತೆ ಉಲ್ಲೇಖ (1)ರ ಮಾರ್ಗಸೂಚಿಯಲ್ಲಿನ ಎಲ್ಲಾ ಅಂಶಗಳು ಯಾವುದೇ ಬದಲಾವಣೆ ಇಲ್ಲದೇ ಮುಂದುವರೆದಿರುತ್ತದೆ. ಉಲ್ಲೇಖ (2)ರ ಸರ್ಕಾರದ ಪತ್ರವನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.

ತಮ್ಮ ವಿಶ್ವಾಸಿ,
16/3/17
ನಿರ್ದೇಶಕರು (ಅಪ್ರ)
ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ

D:\Shruthi\Audit Fee\Ramesh\Letter-A.Fee.docx

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ಐ.ಎಸ್.ಓ ಪ್ರಮಾಣೀಕೃತ ಶಾಸನಬದ್ಧ ಸಹಕಾರಿ ಸಂಸ್ಥೆ

ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010.

www.souharda.coop. Ph: 080-23378375-80. Email:souharda@souharda.coop


ಸಂಖ್ಯೆ:ಸಂಸ/ಶಾ.ನಿ/ಲೆ.ಶು/2017–18 |249 ದಿನಾಂಕ: 15.05.2017

ಇವರಿಗೆ:
ಮಾನ್ಯ ಪ್ರಧಾನ ಕಾರ್ಯದರ್ಶಿಗಳು,
ಸಹಕಾರ ಇಲಾಖೆ, ಬಹುಮಹಡಿ ಕಟ್ಟಡ,
ಬೆಂಗಳೂರು–560 052.

ಮಾನ್ಯರೇ,

ವಿಷಯ : **ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧಕರಿಗೆ ಪಾವತಿಸಬೇಕಾದ ಲೆಕ್ಕಪರಿಶೋಧನಾ ಶುಲ್ಕದ ನಿಗದಿಪಡಿಸಿ ಹೊರಡಿಸಿರುವ ಮಾರ್ಗಸೂಚಿಗಳ ಕುರಿತು**

ಉಲ್ಲೇಖ : **1. ದಿನಾಂಕ: 21.11.2013ರ ಸಹಕಾರಿಗಳ ಲೆಕ್ಕಪರಿಶೋಧನಾ ನಿರ್ದೇಶಕರ ಮಾರ್ಗಸೂಚಿ ಸಂಖ್ಯೆ:ಎಡಿಎಫ್/ಎಡಿಸಿ/52/2012–13**

**2. ದಿನಾಂಕ: 19.12.2016ರ ತಮ್ಮ ಕಛೇರಿಯ ಪತ್ರ ಸಂಖ್ಯೆ:ಸಿಒ/92/ಸಿಎಲ್ಎಂ/2016.**

**3. ದಿನಾಂಕ: 16.03.2017ರ ಸಹಕಾರಿಗಳ ಲೆಕ್ಕಪರಿಶೋಧನಾ ನಿರ್ದೇಶಕರ ಮಾರ್ಗಸೂಚಿ ಸಂಖ್ಯೆ:ಎಡಿಎಫ್/ಎಡಿಸಿ/52/2012–13.**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸಹಕಾರಿಗಳ ಲೆಕ್ಕಪರಿಶೋಧನಾ ನಿರ್ದೇಶಕರು ಉಲ್ಲೇಖ 1 ಮಾರ್ಗಸೂಚಿಯ ಪುಟ ಸಂಖ್ಯೆ:03ರ ಕ್ರಮ ಸಂಖ್ಯೆ:02ರಲ್ಲಿ "ಪ್ರತಿಯೊಂದು ಸಹಕಾರಿಯು ಲೆಕ್ಕಪರಿಶೋಧಕರ/ಲೆಕ್ಕಪರಿಶೋಧನಾ ಸಂಸ್ಥೆಯೊಂದಿಗೆ ಸಂಭಾವನೆ ದರವನ್ನು ಸಂಧಾನದ ಮೂಲಕ ತೀರ್ಮಾನಿಸಿಕೊಳ್ಳಲು ಸ್ವತಂತ್ರರಾಗಿರುತ್ತಾರೆ" ಎಂಬ ಪ್ರಾವಧಾನವಿತ್ತು, ಆದರೆ, ನಂತರದಲ್ಲಿ ತಮ್ಮ ಕಛೇರಿಯಿಂದ ಸದರಿ ಪ್ರಾವಧಾನವನ್ನು ಕೈ ಬಿಡಲು ಅನುಮತಿ ನೀಡಿರುವ ಉಲ್ಲೇಖ 2ರ ಪತ್ರವನ್ನು ಉಲ್ಲೇಖಿಸಿ, ಸಹಕಾರಿಗಳ ಲೆಕ್ಕಪರಿಶೋಧನಾ ನಿದೇಶಕರು ಉಲ್ಲೇಖ 3ರ ಮಾರ್ಗಸೂಚಿಯನ್ನು ಹೊರಡಿಸಿರುತ್ತಾರೆ. ಸದರಿ ಮಾರ್ಗಸೂಚಿಯಲ್ಲಿ ಇನ್ನು ಮುಂದೆ ಸೌಹಾರ್ದ ಸಹಕಾರಿಗಳು ಲೆಕ್ಕಪರಿಶೋಧನೆಗೆ ಪಾವತಿಸಬೇಕಾದ ಲೆಕ್ಕಪರಿಶೋಧನಾ ಶುಲ್ಕ/ಸಂಭಾವನೆಯನ್ನು ಸಂಧಾನದ ಮೂಲಕ ತೀರ್ಮಾನಿಸಿಕೊಳ್ಳಲು ಅವಕಾಶವಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಉಲ್ಲೇಖ 1ರ ಮಾರ್ಗಸೂಚಿಯಲ್ಲಿ ನಿಗದಿಪಡಿಸಿರುವ ಲೆಕ್ಕಪರಿಶೋಧನಾ ಶುಲ್ಕ/ಸಂಭಾವನೆಯನ್ನು ಲೆಕ್ಕಪರಿಶೋಧಕರಿಗೆ ಪಾವತಿಸತಕ್ಕದ್ದು ಎಂದು ತಿಳಿಸಿರುತ್ತಾರೆ. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ,1997ರ ಕಲಂ 23(3)(ಬಿ)ರಂತೆ ಲೆಕ್ಕಪರಿಶೋಧಕರನ್ನು ನೇಮಕ ಮಾಡುವ ಪ್ರಾಧಿಕಾರ ಆಯಾ ಸೌಹಾರ್ದ ಸಹಕಾರಿಗಳ ಸಾಮಾನ್ಯ ಸಭೆ ಆಗಿರುತ್ತದೆ. ಕರ್ನಾಟಕ ಸೌಹಾರ್ದ ಸಹಕಾರಿ ನಿಯಮ 9ಡಿ ರಂತೆ **"ಒಂದು ಸಹಕಾರಿಯು ಯಾವುದೇ ಸಹಕಾರಿ ವರ್ಷದ ಲೆಕ್ಕ ಪತ್ರಗಳನ್ನು ಪರಿಶೋಧಿಸಲು ಅಥವಾ ಪರಿಶೋಧನೆ ಮಾಡಿದಲ್ಲಿ ಆ ಬಗ್ಗೆ ಲೆಕ್ಕಪರಿಶೋಧಕರಿಗೆ ಅಥವಾ ಲೆಕ್ಕಪರಿಶೋಧನಾ ಸಂಸ್ಥೆಗೆ ಸಂಭಾವನೆಯನ್ನು ಸಹಕಾರಿ ಸಂಸ್ಥೆಯ ಸಾಮಾನ್ಯ ನಿಕಾಯವು** ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರಿಂದ ದುಡಿಯುವ ಬಂಡವಾಳ ಮತ್ತು ವ್ಯಾಪಾರ ವಹಿವಾಟು ಆಧರಿಸಿ ಕಾಲಕಾಲಕ್ಕೆ ನೀಡುವ ಮಾರ್ಗ ಸೂಚಿಗಳನ್ವಯ ನಿಗದಿಪಡಿಸತಕ್ಕದ್ದು" ಎಂದಿರುತ್ತದೆ.

ಸೌಹಾರ್ದ ಸಹಕಾರಿ ಅಧಿನಿಯಮದ ಆಶಯದಂತೆ ಮಾನ್ಯ ಸಹಕಾರಿಗಳ ಲೆಕ್ಕಪರಿಶೋಧನಾ ನಿರ್ದೇಶಕರು, ಲೆಕ್ಕಪರಿಶೋಧನಾ ಶುಲ್ಕ/ಸಂಭಾವನೆಯನ್ನು ನಿರ್ದಿಷ್ಟವಾಗಿ ನಿಗದಪಡಿಸದೇ ಮಾರ್ಗಸೂಚಿ ರೂಪದಲ್ಲಿ ನೀಡುವುದು ಸೂಕ್ತವಾಗಿತ್ತು.

ಆದರೆ ಲೆಕ್ಕಪರಿಶೋಧನಾ ಶುಲ್ಕ/ಸಂಭಾವನೆಯನ್ನು ನಿರ್ದಿಷ್ಟವಾಗಿ ಪಾವತಿಸುವ ರೂಪದಲ್ಲಿ ನೀಡಿರುವ ಮಾರ್ಗಸೂಚಿಯು ಸೌಹಾರ್ದ ಸಹಕಾರಿ ಅಧಿನಿಯಮದ ಮೂಲ ಆಶಯದಂತೆ ಸಹಕಾರಿಗಳ ಅಂತಿಮ ಪ್ರಾಧಿಕಾರವಾದ ಸಾಮಾನ್ಯ ಸಭೆಯ ಅಧಿಕಾರವನ್ನು ಮೊಟಕುಗೊಳಿಸಿದಂತಾಗುತ್ತದೆ. ಈಗಾಗಲೇ ಸಹಕಾರಿಗಳ ಲೆಕ್ಕಪರಿಶೋಧನಾ ನಿರ್ದೇಶಕರು ಉಲ್ಲೇಖ 1ರ ಮಾರ್ಗಸೂಚಿಯಲ್ಲಿ ಸಹಕಾರಿಗಳ ದುಡಿಯುವ ಬಂಡವಾಳದ ಆಧಾರದಲ್ಲಿ ಲೆಕ್ಕಪರಿಶೋಧನಾ ಶುಲ್ಕ/ಸಂಭಾವನೆಯನ್ನು ನಿರ್ಧರಿಸಿ ಮಾರ್ಗಸೂಚಿಯನ್ನು ಹೊರಡಿಸಿರುತ್ತದೆ. ಅದರ ಬದಲಾಗಿ ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧಕರಿಗೆ ಪಾವತಿಸಬೇಕಾದ ಲೆಕ್ಕಪರಿಶೋಧನಾ ಶುಲ್ಕ/ಸಂಭಾವನೆಯ ಕನಿಷ್ಠ ಮತ್ತು ಗರಿಷ್ಠ ಮಿತಿಯನ್ನು ನಿಗದಿಪಡಿಸಿಕೊಂಡು, ಸದರಿ ಮಿತಿಯ ವ್ಯಾಪ್ತಿಯೊಳಗಾಗಿ ಲೆಕ್ಕಪರಿಶೋಧನಾ ಶುಲ್ಕ/ಸಂಭಾವನೆಯನ್ನು ನಿರ್ಧರಿಸುವ ಅಧಿಕಾರವನ್ನು ಸೌಹಾರ್ದ ಸಹಕಾರಿಗಳ ಸಾಮಾನ್ಯ ಸಭೆಗೆ ನೀಡುವುದು ಸೂಕ್ತ. ಈ ಹಿನ್ನೆಲೆಯಲ್ಲಿ ತಮ್ಮ ಕಛೇರಿಯಿಂದ ನೀಡಿರುವ ಉಲ್ಲೇಖ 2ರ ಪತ್ರದ ಕುರಿತು ಮರುಪರಿಶೀಲಿಸಿ, **ಸಹಕಾರಿಗಳ ಲೆಕ್ಕಪರಿಶೋಧನಾ ನಿರ್ದೇಶಕರು ಲೆಕ್ಕಪರಿಶೋಧಕರಿಗೆ ಪಾವತಿಸಬೇಕಾದ ಲೆಕ್ಕಪರಿಶೋಧನಾ ಶುಲ್ಕ/ಸಂಭಾವನೆಯ ಕನಿಷ್ಠ ಮತ್ತು ಗರಿಷ್ಠ ಮಿತಿಯ ವ್ಯಾಪ್ತಿಯೊಳಗಾಗಿ ಲೆಕ್ಕಪರಿಶೋಧನಾ ಶುಲ್ಕ/ಸಂಭಾವನೆಯನ್ನು ನಿರ್ಧರಿಸುವ ಅಧಿಕಾರವನ್ನು ಆಯಾ ಸೌಹಾರ್ದ ಸಹಕಾರಿಗಳ ಸಾಮಾನ್ಯ ಸಭೆಗಳಿಗೆ ನೀಡಲು** ಸಹಕಾರಿಗಳ ಲೆಕ್ಕಪರಿಶೋಧನಾ ನಿರ್ದೇಶಕರಿಗೆ ಸೂಕ್ತ ನಿರ್ದೇಶನ ನೀಡಬೇಕಾಗಿ ಸಮಸ್ತ ಸೌಹಾರ್ದ ಸಹಕಾರಿಗಳ ಪರವಾಗಿ ವಿನಂತಿಸಿಕೊಳ್ಳುತ್ತೇನೆ.

ವಂದನೆಗಳೊಂದಿಗೆ,

(ಶರಣಗೌಡ ಜಿ.ಪಾಟೀಲ)
ವ್ಯವಸ್ಥಾಪಕ ನಿರ್ದೇಶಕರು

ಲಗತ್ತುಗಳು:

1. ದಿನಾಂಕ: 21.11.2013ರ ಸಹಕಾರಿಗಳ ಲೆಕ್ಕಪರಿಶೋಧನಾ ನಿರ್ದೇಶಕರ ಮಾರ್ಗಸೂಚಿ
2. ದಿನಾಂಕ: 19.12.2016ರ ತಮ್ಮ ಕಛೇರಿಯ ಪತ್ರ.
3. ದಿನಾಂಕ: 16.03.2017ರ ಸಹಕಾರಿಗಳ ಲೆಕ್ಕಪರಿಶೋಧನಾ ನಿರ್ದೇಶಕರ ಮಾರ್ಗಸೂಚಿ

ಸಂಖ್ಯೆ: ಆರ್.ಎಸ್.ಆರ್:ಸೌಕಾ:136/ನೋ:051/2001-02

www.souharda.coop
email : chairman@souharda.coop

ಬಿ. ಹೆಚ್. ಕೃಷ್ಣಾರೆಡ್ಡಿ
ಅಧ್ಯಕ್ಷರು

Karnataka State Souharda
Federal Cooperative Limited
Nirmana Bhavan, Dr. Rajkumar Road
1st Block, Rajajinagar, Bengaluru-560010
(ದೂ) 080-23378375-80

ಕರ್ನಾಟಕ ರಾಜ್ಯ ಸೌಹಾರ್ದ
ಸಂಯುಕ್ತ ಸಹಕಾರಿ
ನಿಯಮಿತ

ನಿರ್ಮಾಣ ಭವನ, ಡಾ. ರಾಜ್‌ಕುಮಾರ್ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010

ಐಎಸ್‌ಓ ಪ್ರಮಾಣೀಕೃತ ಶಾಸನಬದ್ಧ ಸಹಕಾರಿ ಸಂಸ್ಥೆ

ಸಂಖ್ಯೆ:ಸಂಸ/ಶಾ.ನಿ/2/ಲೆ.ಶು/2017-18 ದಿನಾಂಕ: 29.08.2017

ಇವರಿಗೆ:
ಮಾನ್ಯ ಪ್ರಧಾನ ಕಾರ್ಯದರ್ಶಿಗಳು,
ಸಹಕಾರ ಇಲಾಖೆ, ಬಹುಮಹಡಿ ಕಟ್ಟಡ,
ಬೆಂಗಳೂರು-560 001.

ಮಾನ್ಯರೇ,

ವಿಷಯ : ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧಕರಿಗೆ ಪಾವತಿಸಬೇಕಾದ ಲೆಕ್ಕಪರಿಶೋಧನಾ ಶುಲ್ಕದ ನಿಗದಿಪಡಿಸಿ ಹೊರಡಿಸಿರುವ ಮಾರ್ಗಸೂಚಿಗಳ ಕುರಿತು

ಉಲ್ಲೇಖ :
1. ದಿನಾಂಕ 21 ನವಂಬರ್ 2013ರ ಸಹಕಾರಿಗಳ ಲೆಕ್ಕಪರಿಶೋಧನಾ ನಿರ್ದೇಶಕರ ಮಾರ್ಗಸೂಚಿ ಸಂಖ್ಯೆ:ಎಡಿಎಫ್/ಎಡಿಸಿ/52/2012-13
2. ದಿನಾಂಕ: 19 ಡಿಸೆಂಬರ್ 2016ರ ತಮ್ಮ ಕಛೇರಿಯ ಪತ್ರ ಸಂಖ್ಯೆ:ಸಿಒ/92/ಸಿಎಲ್‌ಎಂ/2016.
3. ದಿನಾಂಕ: 16 ಮಾರ್ಚ್ 2017ರ ಸಹಕಾರಿಗಳ ಲೆಕ್ಕಪರಿಶೋಧನಾ ನಿರ್ದೇಶಕರ ಮಾರ್ಗಸೂಚಿ ಸಂಖ್ಯೆ:ಎಡಿಎಫ್/ಎಡಿಸಿ/52/2012-13.
4. ದಿನಾಂಕ 15 ಮೇ 2017ರ ಸಂಯುಕ್ತ ಸಹಕಾರಿಯ ಪತ್ರ ಸಂಖ್ಯೆ: ಸಂಸ/ಶಾ.ನಿ/ಲೆ.ಶು/2017-18.

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಸಹಕಾರಿಗಳ ಲೆಕ್ಕಪರಿಶೋಧನಾ ನಿರ್ದೇಶಕರ ಉಲ್ಲೇಖ 1ರ ಮಾರ್ಗಸೂಚಿಯ ಪುಟ ಸಂಖ್ಯೆ:03ರ ಕ್ರಮ ಸಂಖ್ಯೆ:02ರಲ್ಲಿ "ಪ್ರತಿಯೊಂದು ಸಹಕಾರಿಯು ಲೆಕ್ಕಪರಿಶೋಧಕರ/ಲೆಕ್ಕಪರಿಶೋಧನಾ ಸಂಸ್ಥೆಯೊಂದಿಗೆ ಸಂಭಾವನೆ ದರವನ್ನು ಸಂಧಾನದ ಮೂಲಕ ತೀರ್ಮಾನಿಸಿಕೊಳ್ಳಲು ಸ್ವತಂತ್ರರಾಗಿರುತ್ತಾರೆ" ಎಂಬ ಪ್ರಾವಧಾನವಿತ್ತು. ಆದರೆ, ನಂತರದಲ್ಲಿ ತಮ್ಮ ಕಛೇರಿಯಿಂದ ಸದರಿ ಪ್ರಾವಧಾನವನ್ನು ಕೈ ಬಿಡಲು ಅನುಮತಿ ನೀಡಿರುವ ಉಲ್ಲೇಖ 2ರ ಪತ್ರವನ್ನು ಉಲ್ಲೇಖಿಸಿ, ಸಹಕಾರಿಗಳ ಲೆಕ್ಕಪರಿಶೋಧನಾ ನಿದೇಶಕರು ಉಲ್ಲೇಖ 3ರ ಮಾರ್ಗಸೂಚಿಯನ್ನು ಹೊರಡಿಸಿರುತ್ತಾರೆ. ಸದರಿ ಮಾರ್ಗಸೂಚಿಯಲ್ಲಿ ಇನ್ನು ಮುಂದೆ ಸೌಹಾರ್ದ ಸಹಕಾರಿಗಳು ಲೆಕ್ಕಪರಿಶೋಧನೆಗೆ ಪಾವತಿಸಬೇಕಾದ ಲೆಕ್ಕಪರಿಶೋಧನಾ ಶುಲ್ಕ/ಸಂಭಾವನೆಯನ್ನು ಸಂಧಾನದ ಮೂಲಕ ತೀರ್ಮಾನಿಸಿಕೊಳ್ಳಲು ಅವಕಾಶವಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಉಲ್ಲೇಖ 1ರ ಮಾರ್ಗಸೂಚಿಯಲ್ಲಿ ನಿಗದಿಪಡಿಸಿರುವ ಲೆಕ್ಕಪರಿಶೋಧನಾ ಶುಲ್ಕ/ಸಂಭಾವನೆಯನ್ನು ಲೆಕ್ಕಪರಿಶೋಧಕರಿಗೆ ಪಾವತಿಸತಕ್ಕದ್ದು ಎಂದು ತಿಳಿಸಿರುತ್ತಾರೆ.

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ,1997ರ ಕಲಂ 23(3)(ಬಿ)ರಂತೆ ಲೆಕ್ಕಪರಿಶೋಧಕರನ್ನು ನೇಮಕ ಮಾಡುವ ಪ್ರಾಧಿಕಾರ ಆಯಾ ಸೌಹಾರ್ದ ಸಹಕಾರಿಗಳ ಸಾಮಾನ್ಯ ಸಭೆ ಆಗಿರುತ್ತದೆ. ಕರ್ನಾಟಕ ಸೌಹಾರ್ದ

ಸಹಕಾರಿ ನಿಯಮ 9ಡಿ ರಂತೆ **"ಒಂದು ಸಹಕಾರಿಯು ಯಾವುದೇ ಸಹಕಾರಿ ವರ್ಷದ ಲೆಕ್ಕ ಪತ್ರಗಳನ್ನು ಪರಿಶೋಧಿಸಲು ಅಥವಾ ಪರಿಶೋಧನೆ ಮಾಡಿದಲ್ಲಿ ಆ ಬಗ್ಗೆ ಲೆಕ್ಕಪರಿಶೋಧಕರಿಗೆ ಅಥವಾ ಲೆಕ್ಕಪರಿಶೋಧನಾ ಸಂಸ್ಥೆಗೆ ಸಂಭಾವನೆಯನ್ನು ಸಹಕಾರಿ ಸಂಸ್ಥೆಯ ಸಾಮಾನ್ಯ ನಿಕಾಯವು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರಿಂದ ದುಡಿಯುವ ಬಂಡವಾಳ ಮತ್ತು ವ್ಯಾಪಾರ ವಹಿವಾಟು ಆಧರಿಸಿ ಕಾಲಕಾಲಕ್ಕೆ ನೀಡುವ ಮಾರ್ಗ ಸೂಚಿಗಳನ್ವಯ ನಿಗದಿಪಡಿಸತಕ್ಕದ್ದು"** ಎಂದಿರುತ್ತದೆ.

ಉಲ್ಲೇಖ 3ರ ಮಾರ್ಗಸೂಚಿ ಕುರಿತಂತೆ ಉಲ್ಲೇಖ 4ರ ಪತ್ರವನ್ನು ತಮ್ಮ ಕಛೇರಿಗೆ ಸಲ್ಲಿಸಿ **ಸಹಕಾರಿಗಳ ಲೆಕ್ಕಪರಿಶೋಧನಾ ನಿರ್ದೇಶಕರು ಲೆಕ್ಕಪರಿಶೋಧಕರಿಗೆ ಪಾವತಿಸಬೇಕಾದ ಲೆಕ್ಕಪರಿಶೋಧನಾ ಶುಲ್ಕ/ಸಂಭಾವನೆಯ ಕನಿಷ್ಠ ಮತ್ತು ಗರಿಷ್ಠ ಮಿತಿಯ ವ್ಯಾಪ್ತಿಯೊಳಗಾಗಿ ಲೆಕ್ಕಪರಿಶೋಧನಾ ಶುಲ್ಕ/ಸಂಭಾವನೆಯನ್ನು ನಿರ್ಧರಿಸುವ ಅಧಿಕಾರವನ್ನು ಆಯಾ ಸೌಹಾರ್ದ ಸಹಕಾರಿಗಳ ಸಾಮಾನ್ಯ ಸಭೆಗಳಿಗೆ ನೀಡಲು** ಸಹಕಾರಿಗಳ ಲೆಕ್ಕಪರಿಶೋಧನಾ ನಿರ್ದೇಶಕರಿಗೆ ಸೂಕ್ತ ನಿರ್ದೇಶನ ನೀಡಬೇಕಾಗಿ ರಾಜ್ಯದ ಸಮಸ್ತ ಸೌಹಾರ್ದ ಸಹಕಾರಿಗಳ ಪರವಾಗಿ ವಿನಂತಿಸಿಕೊಳ್ಳಲಾಗಿತ್ತು.

**ಪ್ರಸ್ತುತ, ಸೌಹಾರ್ದ ಸಹಕಾರಿಗಳಿಗೆ ಉಲ್ಲೇಖ 3ರ ಮಾರ್ಗಸೂಚಿಯನ್ವಯ ಲೆಕ್ಕಪರಿಶೋಧನಾ ಶುಲ್ಕವನ್ನು ಪಾವತಿಸುವುದು ಆರ್ಥಿಕ ಹೊರೆಯಾಗುವ ಕಾರಣ, ಉಲ್ಲೇಖ 02ರ ಆದೇಶವನ್ನು ಹಿಂಪಡೆಯಲು ಹಾಗೂ ಉಲ್ಲೇಖ 03ರ ಮಾರ್ಗಸೂಚಿಯನ್ನು ಕೂಡ ಹಿಂಪಡೆಯುವಂತೆ ಲೆಕ್ಕಪರಿಶೋಧನಾ ನಿರ್ದೇಶಕರಿಗೆ ನಿರ್ದೇಶನ ನೀಡಲು ರಾಜ್ಯದ 4100ಕ್ಕೂ ಹೆಚ್ಚಿರುವ ಸಮಸ್ತ ಸೌಹಾರ್ದ ಸಹಕಾರಿಗಳ ಪರವಾಗಿ ಈ ಮೂಲಕ ವಿನಂತಿಸಿದೆ.**

**ವಂದನೆಗಳೊಂದಿಗೆ,**

Karnataka State Souharda Federal Co-operative Ltd. Reg. No. RSR / SOU / ACT / 136 / Regn. 051 / 2001-02 dated: 04-01-2002 * Bengaluru *

(ಬಿ.ಹೆಚ್.ಕೃಷ್ಣಾರೆಡ್ಡಿ)
ಅಧ್ಯಕ್ಷರು



ಕರ್ನಾಟಕ ಸರ್ಕಾರ.

ಸಂಖ್ಯೆ:ಸಿಜ 124ಸಿಎಲ್ಎಂ 2017

ಕರ್ನಾಟಕ ಸರ್ಕಾರದ ಸಚಿವಾಲಯ.
ಬಹುಮಹಡಿ ಕಟ್ಟಡ.
ಬೆಂಗಳೂರು. ದಿನಾಂಕ: 06 -10-2017.

ಇವರಿಂದ:

ಸರ್ಕಾರದ ಕಾರ್ಯದರ್ಶಿ,
ಸಹಕಾರ ಇಲಾಖೆ.
ಬೆಂಗಳೂರು-560 001.

ಇವರಿಗೆ:

ಸಹಕಾರ ಸಂಘಗಳ ನಿಬಂಧಕರು,
ನಂ. 1, ಆಲಿ ಆಸ್ಕರ್ ರಸ್ತೆ.
ಬೆಂಗಳೂರು-52.

**ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ನಿರ್ದೇಶಕರು**
**ನಂ.17,ಜಯನಿವಾಸ,ಶಂಕರಮಠ ರಸ್ತೆ,**
**ಬಸವನಗುಡಿ,ಬೆಂಗಳೂರು-560004**

ಮಾನ್ಯರೆ,

ವಿಷಯ: ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧಕರಿಗೆ ಪಾವತಿಸಬೇಕಾದ ಲೆಕ್ಕಪರಿಶೋಧನಾ ಶುಲ್ಕ ನಿಗದಿಪಡಿಸಿ ಹೊರಡಿಸಿರುವ ಮಾರ್ಗಸೂಚಿಗಳ ಬಗ್ಗೆ

ಉಲ್ಲೇಖ:_(1) ಶ್ರೀ ಜಿ.ಹೆಚ್.ಕೃಷ್ಣಾರೆಡ್ಡಿ ಅಧ್ಯಕ್ಷರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ ಬೆಂಗಳೂರು ಇವರ ಮನವಿ ದಿನಾಂಕ29-08-2017

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಮನವಿ ಹಾಗೂ ಅದರೊಂದಿಗಿನ ಅಡಕವನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ. ಸದರಿ ಮನವಿಯಲ್ಲಿಯ ವಿಷಯವನ್ನು ನಿಯಮಾನುಸಾರ ಪರಿಶೀಲಿಸಿ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಕೋರಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಡಿ.ಧನಂಜಯ)
ಸರ್ಕಾರದ ಅಧೀನ ಕಾರ್ಯದರ್ಶಿ-3.
ಸಹಕಾರ ಇಲಾಖೆ.
ದೂ.ಸಂ.22032479.

06/10/17

ಪ್ರತಿ ಮಾಹಿತಿಗಾಗಿ:

1) ಶ್ರೀ ಜಿ.ಹೆಚ್ ಕೃಷ್ಣಾರೆಡ್ಡಿ ಅಧ್ಯಕ್ಷರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ ನಿರ್ಮಾಣ ಭವನ ಡಾ//ರಾಜಕುಮಾರ ರಸ್ತೆ.1ನೇ ಬ್ಲಾಕ್ ರಾಜಾಜಿನಗರ.ಬೆಂಗಳೂರು-560010.

ಬೆಂಗಳೂರು-10
23 OCT 2017
5976

ನೋಂ. ಸಂಖ್ಯೆ: ಆರ್.ಎಸ್.ಆರ್:ಸೌಕಾ:136/ನೋ:051/2001-02
www.souharda.coop
Karnataka State Souharda
Federal Cooperative Limited
Nirmana Bhavan, Dr. Rajkumar Road
1st Block, Rajajinagar, Bengaluru-560010
(ದೂ) 080-23378375-80
email : souharda@souharda.coop
ಕರ್ನಾಟಕ ರಾಜ್ಯ ಸೌಹಾರ್ದ
ಸಂಯುಕ್ತ ಸಹಕಾರಿ
ನಿಯಮಿತ
ನಿರ್ಮಾಣ ಭವನ, ಡಾ. ರಾಜ್‌ಕುಮಾರ್ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
ಐಎಸ್‌ಓ ಪ್ರಮಾಣೀಕೃತ - ಶಾಸನಬದ್ಧ ಸಂಸ್ಥೆ

ಸಂಖ್ಯೆ:ಸಂಸ/ಶಾ.ನಿ/3/ಲೆ.ಶು/2017-18 ದಿನಾಂಕ: 02.03.2018

ಇವರಿಗೆ:

ಮಾನ್ಯ ಕಾರ್ಯದರ್ಶಿಗಳು
ಸಹಕಾರ ಇಲಾಖೆ
ಕರ್ನಾಟಕ ಸರ್ಕಾರ. ಬೆಂಗಳೂರು-560 052.

ಮಾನ್ಯರೇ,

ವಿಷಯ : ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧಕರಿಗೆ ಪಾವತಿಸಬೇಕಾದ ಲೆಕ್ಕಪರಿಶೋಧನಾ ಶುಲ್ಕದ ನಿಗದಿಪಡಿಸಿ ಹೊರಡಿಸಿರುವ ಮಾರ್ಗಸೂಚಿಗಳ ಕುರಿತು

ಉಲ್ಲೇಖ : 1. ದಿನಾಂಕ 21 ನವಂಬರ್ 2013ರ ಸಹಕಾರಿಗಳ ಲೆಕ್ಕಪರಿಶೋಧನಾ ನಿರ್ದೇಶಕರ ಮಾರ್ಗಸೂಚಿ ಸಂಖ್ಯೆ:ಎಡಿಎಫ್/ಎಡಿಸಿ/52/2012-13

2. ದಿನಾಂಕ: 19 ಡಿಸೆಂಬರ್ 2016ರ ಕರ್ನಾಟಕ ಸರ್ಕಾರದ ಪತ್ರ ಸಂಖ್ಯೆ:ಸಿಒ/92/ಸಿಎಲ್‌ಎಂ/2016.

3. ದಿನಾಂಕ: 16 ಮಾರ್ಚ್ 2017ರ ಸಹಕಾರಿಗಳ ಲೆಕ್ಕಪರಿಶೋಧನಾ ನಿರ್ದೇಶಕರ ಮಾರ್ಗಸೂಚಿ ಸಂಖ್ಯೆ:ಎಡಿಎಫ್/ಎಡಿಸಿ/52/2012-13.

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಸಹಕಾರಿಗಳ ಲೆಕ್ಕಪರಿಶೋಧನಾ ನಿರ್ದೇಶಕರು ಉಲ್ಲೇಖ 1ರ ಮಾರ್ಗಸೂಚಿಯ ಪುಟ ಸಂಖ್ಯೆ:03ರ ಕ್ರಮ ಸಂಖ್ಯೆ:02ರಲ್ಲಿ "ಪ್ರತಿಯೊಂದು ಸಹಕಾರಿಯು ಲೆಕ್ಕಪರಿಶೋಧಕರ/ಲೆಕ್ಕಪರಿಶೋಧನಾ ಸಂಸ್ಥೆಯೊಂದಿಗೆ ಸಂಭಾವನೆ ದರವನ್ನು ಸಂಧಾನದ ಮೂಲಕ ತೀರ್ಮಾನಿಸಿಕೊಳ್ಳಲು ಸ್ವತಂತ್ರರಾಗಿರುತ್ತಾರೆ" ಎಂಬ ಪ್ರಾವಧಾನವಿತ್ತು. ಆದರೆ, ನಂತರದಲ್ಲಿ ಕರ್ನಾಟಕ ಘನ ಸರ್ಕಾರವು ಸದರಿ ಪ್ರಾವಧಾನವನ್ನು ಕೈ ಬಿಡಲು ಅನುಮತಿ ನೀಡಿರುವ ಉಲ್ಲೇಖ 2ರ ಪತ್ರವನ್ನು ಉಲ್ಲೇಖಿಸಿ, ಮಾನ್ಯ ಸಹಕಾರಿಗಳ ಲೆಕ್ಕಪರಿಶೋಧನಾ ನಿದೇಶಕರು ಉಲ್ಲೇಖ 3ರ ಮಾರ್ಗಸೂಚಿಯನ್ನು ಹೊರಡಿಸಿರುತ್ತಾರೆ. ಸದರಿ ಮಾರ್ಗಸೂಚಿಯಲ್ಲಿ ಇನ್ನು ಮುಂದೆ ಸೌಹಾರ್ದ ಸಹಕಾರಿಗಳು ಲೆಕ್ಕಪರಿಶೋಧನೆಗೆ ಪಾವತಿಸಬೇಕಾದ ಲೆಕ್ಕಪರಿಶೋಧನಾ ಶುಲ್ಕ/ಸಂಭಾವನೆಯನ್ನು ಸಂಧಾನದ ಮೂಲಕ ತೀರ್ಮಾನಿಸಿಕೊಳ್ಳಲು ಅವಕಾಶವಿರುವುದಿಲ್ಲವಾದ ಕಾರಣ ಉಲ್ಲೇಖ 1ರ ಮಾರ್ಗಸೂಚಿಯಲ್ಲಿ ನಿಗದಿಪಡಿಸಿರುವ ಲೆಕ್ಕಪರಿಶೋಧನಾ ಶುಲ್ಕ/ಸಂಭಾವನೆಯನ್ನು ಲೆಕ್ಕಪರಿಶೋಧಕರಿಗೆ ಪಾವತಿಸತಕ್ಕದ್ದು ಎಂದು ತಿಳಿಸಿರುತ್ತಾರೆ. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 23(3)(ಬಿ)ರಂತೆ ಲೆಕ್ಕಪರಿಶೋಧಕರನ್ನು ನೇಮಕ ಮಾಡುವ ಪ್ರಾಧಿಕಾರ

ಆಯಾ ಸೌಹಾರ್ದ ಸಹಕಾರಿಗಳ ಸಾಮಾನ್ಯ ಸಭೆ ಆಗಿರುತ್ತದೆ. ಕರ್ನಾಟಕ ಸೌಹಾರ್ದ ಸಹಕಾರಿ ನಿಯಮ 9ಡಿ ರಂತೆ **"ಒಂದು ಸಹಕಾರಿಯು ಯಾವುದೇ ಸಹಕಾರಿ ವರ್ಷದ ಲೆಕ್ಕ ಪತ್ರಗಳನ್ನು ಪರಿಶೋಧಿಸಲು ಅಥವಾ ಪರಿಶೋಧನೆ ಮಾಡಿದಲ್ಲಿ ಆ ಬಗ್ಗೆ ಲೆಕ್ಕಪರಿಶೋಧಕರಿಗೆ ಅಥವಾ ಲೆಕ್ಕಪರಿಶೋಧನಾ ಸಂಸ್ಥೆಗೆ ಸಂಭಾವನೆಯನ್ನು ಸಹಕಾರಿ ಸಂಸ್ಥೆಯ ಸಾಮಾನ್ಯ ನಿಕಾಯವು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರಿಂದ ದುಡಿಯುವ ಬಂಡವಾಳ ಮತ್ತು ವ್ಯಾಪಾರ ವಹಿವಾಟು ಆಧರಿಸಿ ಕಾಲಕಾಲಕ್ಕೆ ನೀಡುವ ಮಾರ್ಗಸೂಚಿಗಳನ್ವಯ ನಿಗದಿಪಡಿಸತಕ್ಕದ್ದು"** ಎಂದಿರುತ್ತದೆ.

ಸೌಹಾರ್ದ ಸಹಕಾರಿಗಳಿಗೆ ಉಲ್ಲೇಖ 3ರ ಮಾರ್ಗಸೂಚಿಯಂತೆ ಲೆಕ್ಕಪರಿಶೋಧನಾ ಶುಲ್ಕವನ್ನು ಪಾವತಿಸುವುದು ಕಡ್ಡಾಯಗೊಳಿಸಿರುವುದರಿಂದ ಆರ್ಥಿಕ ಹೊರೆಯಾಗುತ್ತದೆ. ಸಹಕಾರಿಗಳಿಗೆ/ಸಂಘಗಳಿಗೆ ಕಾಯ್ದೆಯಡಿ ಸಾಮಾನ್ಯ ಸಭೆಗೆ ನೀಡಿರುವ ಅಧಿಕಾರವನ್ನು ಮಾರ್ಗಸೂಚಿ ನೀಡುವ ಮೂಲಕ ಕಸಿದುಕೊಂಡಂತಾಗಿದೆ. ಇದು ಕಾಯ್ದೆಯ ಆಶಯಕ್ಕೆ ವಿರುದ್ಧವಾಗಿರುತ್ತದೆ. ಕಾರಣ ಸದರಿ ಮಾರ್ಗಸೂಚಿಯನ್ನು ಹಿಂಪಡೆಯುವಂತೆ ಲೆಕ್ಕಪರಿಶೋಧನಾ ನಿರ್ದೇಶಕರಿಗೆ ನಿರ್ದೇಶನ ನೀಡಲು ಈ ಮೂಲಕ ವಿನಂತಿ.

ವಂದನೆಗಳೊಂದಿಗೆ,

(ಬಿ.ಹೆಚ್.ಕೃಷ್ಣಾರೆಡ್ಡಿ)
ಅಧ್ಯಕ್ಷರು

Karnataka State Souharda Federal Co-operative Ltd.
Reg. No. RSR / SOU / ACT / 130 / Regn. 031 / 2001-02 dated: 04-01-2002
* Bengaluru *